## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1102
ಸದಸ್ಯರ ಹೆಸರು : ಶ್ರೀ ಎಸ್.ವಿ. ಸಂಕನೂರ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.12.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಇತ್ತೀಚಿನ ದಿನಗಳಲ್ಲಿ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದು ನಿಜವೇ; ಹಾಗಿದ್ದಲ್ಲಿ, ಪ್ರಯಾಣಿಕರ ಅನುಕೂಲಕ್ಕಾಗಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆಯೇ; (ವಿವರವಾದ ಮಾಹಿತಿ ನೀಡುವುದು) | ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದು ನಿಜ.<br><br>ರಾಜ್ಯದಲ್ಲಿ ಶಕ್ತಿ ಯೋಜನೆ ಅನುಷ್ಠಾನದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ದಿನ ನಿತ್ಯ ಹೆಚ್ಚಾಗಿರುವ ನಿಗಮವಾರು ಪ್ರಯಾಣಿಕರ ಸಂಖ್ಯೆ ಕೆಳಕಂಡಂತಿದೆ: |
| ಆ. | ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚಿನ ಬಸ್ಸುಗಳನ್ನು ಖರೀದಿಸಲಾಗಿದೆಯೇ; (ವಿವರ ನೀಡುವುದು) | (see below) |

**ಸರಾಸರಿ ಪ್ರಯಾಣಿಕರ ಸಂಖ್ಯೆ (ಲಕ್ಷಗಳಲ್ಲಿ)**

| ನಿಗಮ | ಶಕ್ತಿ ಯೋಜನೆ ಪೂರ್ವ | ಶಕ್ತಿ ಯೋಜನೆ ನಂತರ | ಸರಾಸರಿ ಹೆಚ್ಚಳ |
|---|---|---|---|
| ಕ.ರಾ.ರ.ಸಾ.ನಿಗಮ | 29.72 | 34.79 | 5.07 |
| ಬೆಂ.ಮ.ಸಾ.ಸಂಸ್ಥೆ | 33.67 | 40.00 | 6.33 |
| ವಾ.ಕ.ರ.ಸಾ.ಸಂಸ್ಥೆ | 16.49 | 24.87 | 8.38 |
| ಕ.ಕ.ರ.ಸಾ.ನಿಗಮ | 13.58 | 16.97 | 3.39 |
| **ಒಟ್ಟು** | **93.46** | **116.63** | **23.17** |

**ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರಲಿಲ್ಲ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರಲಿಲ್ಲ.**

ಆದರೆ 2023-24 ಹಾಗೂ 2024-25ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಲ್ಲಿ ಖರೀದಿಸಲಾದ/ ಖರೀದಿಸಲಾಗುವ ಬಸ್‌ಗಳ ವಿವರ ಕೆಳಗಿನಂತಿರುತ್ತದೆ:

| ಸಂಸ್ಥೆ | ಸೇರ್ಪಡೆಯಾದ ಬಸ್‌ಗಳ ಸಂಖ್ಯೆ | ಸೇರ್ಪಡೆಗೊಳಿಸ-ಲಾಗುತ್ತಿರುವ ಬಸ್‌ಗಳ ಸಂಖ್ಯೆ |
|---|---|---|
| ಕ.ರಾ.ರ.ಸಾ.ನಿಗಮ | 1118 | 20 |
| ಬೆಂ.ಮ.ಸಾ.ಸಂಸ್ಥೆ | 1510 | 699 |
| ವಾ.ಕ.ರ.ಸಾ.ಸಂಸ್ಥೆ | 662 | 554 |
| ಕ.ಕ.ರ.ಸಾ.ನಿಗಮ | 1014 | 73 |
| **ಒಟ್ಟು** | **4304** | **1346** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**<br>ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಅಲ್ಲದೇ, ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ 194 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ಶಕ್ತಿ ಯೋಜನೆ ಅನುಷ್ಠಾನಗೊಂಡ ದಿನಾಂಕದಿಂದ ನಿಗಮದಿಂದ 867 ಪುನಶ್ಚೇತನಗೊಳಿಸಿದ ಬಸ್ಸುಗಳನ್ನು ನಿಗಮದ ವ್ಯಾಪ್ತಿಯ ವಿಭಾಗಗಳಿಗೆ ನಿಯೋಜಿಸಲಾಗಿರುತ್ತದೆ.<br><br>ಶಕ್ತಿ ಯೋಜನೆ ಜಾರಿಗೂ ಮೊದಲು ನಿಗಮದ ವತಿಯಿಂದ 45255 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ 50083 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿದಿನ 4828 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**<br>ಸಂಸ್ಥೆಯಲ್ಲಿ ಪ್ರಸ್ತುತ 2500 ನಿರ್ವಾಹಕ, ದರ್ಜೆ-3 ಹುದ್ದೆಯ ಮೂಲ ದಾಖಲಾತಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಅಲ್ಲದೇ, ಅನುಕಂಪದ ಆಧಾರದ ಮೇಲೆ ಚಾಲಕ / ನಿರ್ವಾಹಕರು ಒಳಗೊಂಡಂತೆ ಒಟ್ಟಾರೆಯಾಗಿ 306 ವಿವಿದ ವೃಂದದ ಹುದ್ದೆಗಳಿಗೆ ನೇಮಕ ಮಾಡಲಾಗಿದೆ.<br><br>ಸಂಸ್ಥೆಯು ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5,808 ಅನುಸೂಚಿಗಳನ್ನು 60,754 ಸುತ್ತುವಳಿಗಳೊಂದಿಗೆ 11.93 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.<br><br>ಸಂಸ್ಥೆಯಲ್ಲಿ ಶಕ್ತಿ ಯೋಜನೆ ಜಾರಿಗೆ ಮೊದಲು ಸಂಸ್ಥೆಯಲ್ಲಿ 5,555 ಅನುಸೂಚಿಗಳಿಂದ 56,646 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ ಪ್ರಸ್ತುತ 5,808 ಅನುಸೂಚಿಗಳಿಂದ 60,754 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಒಟ್ಟು 253 ಅನುಸೂಚಿಗಳನ್ನು ಹಾಗೂ 4,108 ಸುತ್ತುವಳಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | **ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**<br><br>ಈಗಾಗಲೇ 2000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ಅದರಂತೆ, 1000 ಚಾಲನಾ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಸದರಿ ನೇಮಕಾತಿ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಉಳಿದ 1000 ಚಾಲನಾ ಸಿಬ್ಬಂದಿಗಳ ನೇಮಕಾತಿಗಾಗಿ ಜಾಹಿರಾತು ಹೊರಡಿಸಲಾಗುವುದು. ಅಲ್ಲದೇ ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ ಒಟ್ಟು 391 ವಿವಿಧ ವೃಂದಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ಶಕ್ತಿ ಯೋಜನೆ ಜಾರಿಗೂ ಮೊದಲು 4567 ಅನುಸೂಚಿಗಳಿಂದ 34676 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿತ್ತು. ಶಕ್ತಿ ಯೋಜನೆ ಜಾರಿ ನಂತರ ಅಂದರೆ ಅಕ್ಟೋಬರ್-2024ರ ಮಾಹೆಯ ಅಂತ್ಯಕ್ಕೆ 4668 ಅನುಸೂಚಿಗಳಿಂದ 36654 ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿ ದಿನ 104 ಅನುಸೂಚಿಗಳನ್ನು ಹಾಗೂ ಒಟ್ಟು 1978 ಸರತಿಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಸಂಸ್ಥೆಯಲ್ಲಿನ ಲಭ್ಯವಿರುವ ಸಂಪನ್ಮೂಲಗಳಿಂದ 104 ಅನುಸೂಚಿಗಳನ್ನು ಹೆಚ್ಚಿಸುವುದಲ್ಲದೇ ಜೂನ್-23ರ ನಂತರದ ಅವಧಿಯಲ್ಲಿ 140 ಅಂತರ ರಾಜ್ಯ ಸಾರಿಗೆಗಳನ್ನು ಸ್ಥಗಿತಗೊಳಿಸಿ ಸದರಿ ವಾಹನಗಳನ್ನೂ ಸಹ ರಾಜ್ಯದೊಳಗೆ ಕಾರ್ಯಾಚರಣೆಗೆ ಬಳಸಿಕೊಂಡು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಚಾಲನಾ ಸಿಬ್ಬಂದಿಗಳ ಕೊರತೆಯನ್ನು ನೀಗಿಸಲು ಹೊರಗುತ್ತಿಗೆ ಆಧಾರದ ಮೇಲೆ 400 ಚಾಲಕರನ್ನು ಪಡೆಯಲಾಗಿದೆ. ಇನ್ನೂ 500 ಚಾಲಕರನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದೆ.<br><br>2024-25ನೇ ಸಾಲಿನ ಅಂತ್ಯಕ್ಕೆ 4745 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜನೆ ರೂಪಿಸಲಾಗಿರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ಪ್ರಸ್ತುತ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಇತರೆ 121 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ನಿಗಮದಲ್ಲಿ ಶಕ್ತಿ ಯೋಜನೆ ಜಾರಿ ಪೂರ್ವ 4028 ಅನುಸೂಚಿಗಳೊಂದಿಗೆ 22214 ಸರತಿಗಳನ್ನು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಕಾರ್ಯಾಚರಿಸಲಾಗುತ್ತಿದ್ದು ಶಕ್ತಿ ಯೋಜನೆ ನಂತರ 4631 ಅನುಸೂಚಿಗಳೊಂದಿಗೆ 27030 ಸರತಿಗಳನ್ನು ಕಾರ್ಯಾಚರಿಸಲಾಗುತ್ತಿದೆ.<br><br>ಶಕ್ತಿ ಯೋಜನೆ ಪೂರ್ವಕ್ಕೆ ಹೋಲಿಸಿದಲ್ಲಿ ಪ್ರತಿ ದಿನ 603 ಹೆಚ್ಚಿನ ಅನುಸೂಚಿಗಳಿಂದ 4816 ಹೆಚ್ಚುವರಿ ಸರತಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ನಾಲ್ಕೂ ಸಾರಿಗೆ ನಿಗಮಗಳಲ್ಲಿ 9000 ಚಾಲನಾ ಸಿಬ್ಬಂದಿಗಳ ನೇಮಕಾತಿಗೆ ಸರ್ಕಾರ ಅನುಮತಿ ನೀಡಿದ್ದು, ಕ.ಕ.ರ.ಸಾ.ನಿಗಮದಲ್ಲಿ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ಹಾಗೂ ಬೆಂ.ಮ.ಸಾ.ಸಂಸ್ಥೆಯಲ್ಲಿ 2000 ನಿರ್ವಾಹಕರನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದೆ. ಕ.ರಾ.ರ.ಸಾ.ನಿಗಮ ಹಾಗೂ ವಾ.ಕ.ರ.ಸಾ.ನಿಗಮದಲ್ಲಿ ದಾಖಲಾತಿ ಪರಿಶೀಲನೆ ಮುಗಿದಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ನಾಲ್ಕೂ ನಿಗಮಗಳು ಸೇರಿ ಇತರೆ 1012 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. |
| ಇ. | ಖರೀದಿ ಮಾಡಿದ್ದಲ್ಲಿ ಯಾವ ಯಾವ ಸಾರಿಗೆ ವಿಭಾಗ ಘಟಕಗಳಿಗೆ ಎಷ್ಟೆಷ್ಟು ಬಸ್ಸುಗಳನ್ನು ನೀಡಲಾಗಿದೆ? (ಮಾಹಿತಿ ನೀಡುವುದು) | ನಾಲ್ಕೂ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಖರೀದಿ ಮಾಡಿರುವ ಬಸ್‌ಗಳನ್ನು ವಿಭಾಗ ಹಾಗೂ ಘಟಕಗಳಿಗೆ ಹಂಚಿಕೆ ಮಾಡಿರುವ ವಿವರ ಕೆಳಕಂಡಂತಿದೆ:-<br><br>**ಸಂಸ್ಥೆ** \| **ವಿಭಾಗ** \| **ಘಟಕ** \| **ಬಸ್‌ಗಳ ಸಂಖ್ಯೆ**<br>ಕ.ರಾ.ರ.ಸಾ.ನಿಗಮ \| 16 \| 83 \| 1108<br>ಬೆಂ.ಮ.ಸಾ.ಸಂಸ್ಥೆ \| 06 (ವಲಯಗಳು) \| 40 \| 1510<br>ವಾ.ಕ.ರ.ಸಾ.ಸಂಸ್ಥೆ \| 09 \| 55 \| 662<br>ಕ.ಕ.ರ.ಸಾ.ನಿಗಮ \| 09 \| 53 \| 1014<br>**ಒಟ್ಟು** \| 40 \| 241 \| 4294<br><br>ವಿಭಾಗ ಹಾಗೂ ಘಟಕವಾರು ವಿವರಗಳನ್ನು '**ಅನುಬಂಧ**'ದಲ್ಲಿ ನೀಡಲಾಗಿದೆ. |
| ಈ. | ಸದ್ಯ ಬಳಸುತ್ತಿರುವ ಬಸ್ಸುಗಳ ನಿರ್ವಹಣೆಯು ಸರಿಯಿಲ್ಲದೆ ಮಾರ್ಗ ಮಧ್ಯದಲ್ಲಿಯೇ ನಿಂತು ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ನಿಜವೇ; ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ? | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಘಟಕಗಳಲ್ಲಿ ಬಸ್‌ಗಳನ್ನು ಮಾರ್ಗ ಕಾರ್ಯಾಚರಣೆಗೆ ಮುಂಚೆ ಮತ್ತು ಮಾರ್ಗ ಕಾರ್ಯಾಚರಣೆ ನಂತರ ದೈನಂದಿನ ವಾಹನ ದುರಸ್ಥಿ ಹಾಗೂ ಕಾಲಕಾಲಕ್ಕೆ ತಾಂತ್ರಿಕ ನಿರ್ವಹಣೆಗಳನ್ನು ಕೈಗೊಳ್ಳಲಾಗುತ್ತಿದೆ. ಬಸ್‌ಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ ಸುಸ್ಥಿತಿಯಲ್ಲಿರುವ ಹಾಗೂ ಸಾರಿಗೆ ಪ್ರಾಧಿಕಾರದಿಂದ ಅರ್ಹತಾ ಪ್ರಮಾಣ ಪತ್ರ ಹೊಂದಿದ ಯೋಗ್ಯ ವಾಹನಗಳನ್ನು ಮಾತ್ರ ಮಾರ್ಗದ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಮುಂದುವರೆದು, ಕಾರ್ಯಾಚರಣೆಯಲ್ಲಿ ಆಕಸ್ಮಿಕವಾಗಿ ಮಾರ್ಗ ಮಧ್ಯೆ ವಾಹನ ನಿಲುಗಡೆಗೊಂಡಲ್ಲಿ ಕೂಡಲೇ ದುರಸ್ಥಿಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಒಂದು ವೇಳೆ ನಿಲುಗಡೆಗೊಂಡ ವಾಹನದಲ್ಲಿ ಹೆಚ್ಚಿನ ತಾಂತ್ರಿಕ ತೊಂದರೆಯಿದ್ದಲ್ಲಿ/ ದುರಸ್ಥಿಗೊಳಿಸಲು ತಡವಾದಲ್ಲಿ ತಕ್ಷಣದಲ್ಲಿ ಸದರಿ ಮಾರ್ಗದಲ್ಲಿ ಬರುವ ನಿಗಮದ ವಾಹನದಲ್ಲಿ ಪ್ರಯಾಣಿಕರನ್ನು ಕಳುಹಿಸಲು ಕ್ರಮ ವಹಿಸಲಾಗುತ್ತಿದೆ.<br><br>ಅಲ್ಲದೇ, ಸಂಸ್ಥೆಯಲ್ಲಿ ಭೌತಿಕ ಮತ್ತು ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಹಾಗೂ ಆಚರಣೆಗೆ ಯೋಗ್ಯವಾಗಿರುವ ಬಸ್ಸುಗಳನ್ನು ಮಾತ್ರ ಆಚರಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 242 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರ

ಅನುಬಂಧ

ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳಲ್ಲಿ 2023-2024 ಹಾಗೂ 2024-2025ನೇ ಸಾಲಿನಲ್ಲಿ ಹೊಸ ಬಸ್‌ಗಳನ್ನು ನಿಯೋಜಿಸಿರುವ ಘಟಕವಾರು ವಿವರ ಕೆಳಕಂಡಂತಿದೆ:

## ಕ.ರಾ.ರ.ಸಾ.ನಿಗಮ:

| ಕ್ರ.ಸಂ | ವಿಭಾಗ | ಘಟಕ | ಘಟಕಗಳಿಗೆ ಒದಗಿಸಿರುವ ಬಸ್‌ಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು ಕೇಂದ್ರೀಯ ವಿಭಾಗ | ಘ-1 | 20 |
| | | ಘ-2 | 12 |
| | | ಘ-4 | 6 |
| | | ಘ-5 | 45 |
| | | ಘ-6 | 30 |
| | | ಘ-7 (ನೆಲಮಂಗಲ) | 3 |
| | | **ಒಟ್ಟು** | **116** |
| 2 | ರಾಮನಗರ | ಕನಕಪುರ | 17 |
| | | ಆನೇಕಲ್ | 8 |
| | | ಚನ್ನಪಟ್ಟಣ | 12 |
| | | ಹಾರೋಹಳ್ಳಿ | 5 |
| | | ರಾಮನಗರ | 14 |
| | | ಮಾಗಡಿ | 10 |
| | | **ಒಟ್ಟು** | **66** |
| 3 | ತುಮಕೂರು | ತುಮಕೂರು ಘ-1 | 14 |
| | | ತುಮಕೂರು ಘ-2 | 19 |
| | | ಕುಣಿಗಲ್ | 17 |
| | | ತುರುವೇಕೆರೆ | 9 |
| | | ತಿಪಟೂರು | 12 |
| | | ಮಧುಗಿರಿ | 6 |
| | | ಶಿರಾ | 16 |
| | | **ಒಟ್ಟು** | **93** |
| 4 | ಕೋಲಾರ | ಕೋಲಾರ | 13 |
| | | ಕೆ.ಜಿ.ಎಫ್ | 13 |
| | | ಶ್ರೀನಿವಾಸಪುರ | 11 |
| | | ಮಾಲೂರು | 11 |
| | | ಮುಳಬಾಗಿಲು | 11 |
| | | **ಒಟ್ಟು** | **59** |
| 5 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 15 |
| | | ಚಿಂತಾಮಣಿ | 16 |
| | | ಬಾಗೇಪಲ್ಲಿ | 15 |
| | | ಗೌರಿಬಿದನೂರು | 12 |
| | | ದೊಡ್ಡಬಳ್ಳಾಪುರ | 6 |
| | | ಶಿಡ್ಲಘಟ್ಟ | 6 |
| | | **ಒಟ್ಟು** | **70** |

| | | | |
|---|---|---|---|
| 6 | ಮೈ.ಗ್ರಾಂ.ವಿ | ಘ-1 | 24 |
| | | ಘ-3 | 18 |
| | | ಕೆ.ಆರ್.ನಗರ | 16 |
| | | ಹುಣಸೂರು | 10 |
| | | ಹೆಚ್.ಡಿ.ಕೋಟೆ | 7 |
| | | ಪಿರಿಯಾಪಟ್ಟಣ | 17 |
| | | **ಒಟ್ಟು** | **92** |
| 7 | ಮೈ.ಸ.ಸಾ.ವಿಭಾಗ | ನಂಜನಗೂಡು | 17 |
| | | ಕುವೆಂಪುನಗರ | 17 |
| | | ಸಾತಗಳ್ಳಿ | 20 |
| | | ವಿಜಯನಗರ | 17 |
| | | **ಒಟ್ಟು** | **71** |
| 8 | ಮಂಡ್ಯ | ಮಂಡ್ಯ | 12 |
| | | ಮದ್ದೂರು | 10 |
| | | ಮಳವಳ್ಳಿ | 26 |
| | | ನಾಗಮಂಗಲ | 14 |
| | | ಕೆ.ಆರ್.ಪೇಟೆ | 9 |
| | | ಪಾಂಡವಪುರ | 16 |
| | | **ಒಟ್ಟು** | **87** |
| 9 | ಚಾಮರಾಜನಗರ | ಚಾಮರಾಜನಗರ | 23 |
| | | ಗುಂಡ್ಲುಪೇಟೆ | 22 |
| | | ಕೊಳ್ಳೇಗಾಲ | 18 |
| | | **ಒಟ್ಟು** | **63** |
| 10 | ಹಾಸನ | ಹಾಸನ ಘ-1 | 16 |
| | | ಹಾಸನ ಘ-2 | 18 |
| | | ಚನ್ನರಾಯಪಟ್ಟಣ | 9 |
| | | ರಾಮನಾಥಪುರ | 6 |
| | | ಹೊಳೆನರಸೀಪುರ | 10 |
| | | ಅರಕಲಗೂಡು | 7 |
| | | **ಒಟ್ಟು** | **66** |
| 11 | ಚಿಕ್ಕಮಗಳೂರು | ಚಿಕ್ಕಮಗಳೂರು | 15 |
| | | ಅರಸೀಕೆರೆ | 12 |
| | | ಸಕಲೇಶಪುರ | 14 |
| | | ಕಡೂರು | 6 |
| | | ಮೂಡಿಗೆರೆ | 9 |
| | | ಬೇಲೂರು | 6 |
| | | **ಒಟ್ಟು** | **62** |

| | | | |
|---|---|---|---|
| 12 | ಮಂಗಳೂರು | ಮಂ. ಘ-1 | 14 |
| | | ಮಂ. ಘ-2 | 8 |
| | | ಮಂ. ಘ-3 | 11 |
| | | ಕುಂದಾಪುರ | 12 |
| | | ಉಡುಪಿ | 12 |
| | | **ಒಟ್ಟು** | **57** |
| 13 | ಪುತ್ತೂರು | ಪುತ್ತೂರು | 8 |
| | | ಧರ್ಮ ಸ್ಥಳ | 10 |
| | | ಬಿ.ಸಿ.ರೋಡ್ | 8 |
| | | ಮಡಿಕೇರಿ | 14 |
| | | ಸುಳ್ಯ | 4 |
| | | **ಒಟ್ಟು** | **44** |
| 14 | ದಾವಣಗೆರೆ | ದಾವಣಗೆರೆ ಘ-1 | 24 |
| | | ದಾವಣಗೆರೆ ಘ-2 | 11 |
| | | ಹರಿಹರ | 23 |
| | | **ಒಟ್ಟು** | **58** |
| 15 | ಶಿವಮೊಗ್ಗ | ಶಿವಮೊಗ್ಗ | 20 |
| | | ಭದ್ರಾವತಿ | 8 |
| | | ಸಾಗರ | 13 |
| | | ಹೊನ್ನಾಳಿ | 8 |
| | | ಶಿಕಾರಿ ಪುರ | 13 |
| | | **ಒಟ್ಟು** | **62** |
| 16 | ಚಿತ್ರದುರ್ಗ | ಚಿತ್ರದುರ್ಗ | 19 |
| | | ಚೆಳ್ಳಕೆರೆ | 10 |
| | | ಹೊಸದುರ್ಗ | 18 |
| | | ಪಾವಗಡ | 5 |
| | | **ಒಟ್ಟು** | **52** |
| | | **ಒಟ್ಟಾರೆ** | **1118** |

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**

| ಕ್ರ.ಸಂ | ವಲಯ | ಘಟಕ | ಘಟಕಗಳಿಗೆ ಒದಗಿಸಿರುವ ಬಸ್‌ಗಳ ಸಂಖ್ಯೆ |
|---|---|---|---|
| 1 | ಪೂರ್ವ | 6 | 27 |
| 2 | | 15 | 14 |
| 3 | | 19 | 22 |
| 4 | | 32 | 120 |
| 5 | | 38 | 18 |
| 6 | | 41 | 15 |
| 7 | | 42 | 12 |
| 8 | | 51 | 7 |

| | | | |
|---|---|---|---|
| | | ಒಟ್ಟು | **235** |
| 9 | | 12 | 21 |
| 10 | | 16 | 68 |
| 11 | | 17 | 22 |
| 12 | ಪಶ್ಚಿಮ | 21 | 31 |
| 13 | | 33 | 28 |
| 14 | | 36 | 10 |
| 15 | | 37 | 15 |
| | | ಒಟ್ಟು | **195** |
| 16 | | 8 | 16 |
| 17 | | 11 | 24 |
| 18 | ಉತ್ತರ | 26 | 30 |
| 19 | | 45 | 28 |
| 20 | | 46 | 18 |
| 21 | | 50 | 15 |
| 22 | | 52 | 9 |
| | | ಒಟ್ಟು | **140** |
| 23 | | 3 | 113 |
| 24 | | 4 | 122 |
| 25 | ದಕ್ಷಿಣ | 27 | 110 |
| 26 | | 20 | 37 |
| 27 | | 34 | 2 |
| | | ಒಟ್ಟು | 384 |
| 28 | | 10 | 120 |
| 29 | | 14 | 31 |
| 30 | | 23 | 14 |
| 31 | ಈಶಾನ್ಯ | 24 | 11 |
| 32 | | 29 | 92 |
| 33 | | 39 | 13 |
| 34 | | 47 | 18 |
| 35 | | 48 | 18 |
| | | ಒಟ್ಟು | **317** |
| 36 | | 22 | 114 |
| 37 | | 31 | 10 |
| 38 | ವಾಯುವ್ಯ | 35 | 100 |
| 39 | | 40 | 6 |
| 40 | | 43 | 9 |
| | | ಒಟ್ಟು | **239** |
| | | ಒಟ್ಟಾರೆ | **1510** |

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:

| ಕ್ರ.ಸಂ | ವಿಭಾಗ | ಘಟಕ | ಘಟಕಗಳಿಗೆ ಒದಗಿಸಿರುವ ಬಸ್‌ಗಳ ಸಂಖ್ಯೆ |
|---|---|---|---|
| 1 | ಬೆಳಗಾವಿ | ಬೆಳಗಾವಿ-01 | 31 |
| 2 | | ಬೆಳಗಾವಿ-02 | 04 |
| 3 | | ಬೆಳಗಾವಿ-03 | 13 |
| 4 | | ಬೆಳಗಾವಿ-04 | 07 |
| 5 | | ಬೈಲಹೊಂಗಲ | 15 |
| 6 | | ಖಾನಾಪೂರ | 9 |
| | | **ಒಟ್ಟು** | **79** |
| 7 | ಹು.ಗ್ರಾ.ವಿಭಾಗ | ಹುಗ್ರಾ-1 | 17 |
| 8 | | ಹುಗ್ರಾ-2 | 14 |
| 9 | | ಹುಗ್ರಾ-3 | 08 |
| 10 | | ನವಲಗುಂದ | 15 |
| 11 | | ಕಲಘಟಗಿ | 14 |
| | | **ಒಟ್ಟು** | **68** |
| 12 | ಧಾರವಾಡ (ಗ್ರಾ) ವಿಭಾಗ | ಧಾರವಾಡ | 14 |
| 13 | | ಸವದತ್ತಿ | 17 |
| 14 | | ರಾಮದುರ್ಗ | 16 |
| 15 | | ಹಳಿಯಾಳ | 12 |
| 16 | | ದಾಂಡೇಲಿ | 08 |
| | | **ಒಟ್ಟು** | **66** |
| 17 | ಉತ್ತರ ಕನ್ನಡ ವಿಭಾಗ | ಶಿರಸಿ | 15 |
| 18 | | ಕುಮಟಾ | 13 |
| 19 | | ಕಾರವಾರ | 11 |
| 20 | | ಭಟ್ಕಳ | 12 |
| 21 | | ಯಲ್ಲಾಪೂರ | 11 |
| 22 | | ಅಂಕೋಲಾ | 8 |
| | | **ಒಟ್ಟು** | **72** |
| 23 | ಬಾಗಲಕೋಟೆ | ಬಾಗಲಕೋಟ | 14 |
| 24 | | ಜಮಖಂಡಿ | 15 |
| 25 | | ಬದಾಮಿ | 09 |
| 26 | | ಇಲಕಲ್ | 12 |
| 27 | | ಮುಧೋಳ | 12 |
| 28 | | ಬೀಳಗಿ | 12 |
| 29 | | ಗುಳೇದಗುಡ್ಡ | 6 |
| 30 | | ಹುನಗುಂದ | 08 |
| | | **ಒಟ್ಟು** | **88** |
| 31 | ಗದಗ | ಗದಗ | 14 |
| 32 | | ರೋಣ | 8 |
| 33 | | ಲಕ್ಷ್ಮೇಶ್ವರ | 8 |
| 34 | | ನರಗುಂದ | 10 |
| 35 | | ಮುಂಡರಗಿ | 11 |
| 36 | | ಬೆಟಗೇರಿ | 8 |

| | | | |
|---|---|---|---|
| 37 | | ಗಜೇಂದ್ರಗಢ | 9 |
| 38 | | ಶಿರಹಟ್ಟಿ | 8 |
| | | **ಒಟ್ಟು** | **76** |
| 39 | ಚಿಕ್ಕೋಡಿ | ಚಿಕ್ಕೋಡಿ | 16 |
| 40 | | ಸಂಕೇಶ್ವರ್ | 10 |
| 41 | | ಗೋಕಾಕ | 16 |
| 42 | | ನಿಪ್ಪಾಣಿ | 10 |
| 43 | | ರಾಯಬಾಗ | 10 |
| 44 | | ಅಥಣಿ | 22 |
| 45 | | ಹುಕ್ಕೇರಿ | 6 |
| | | **ಒಟ್ಟು** | **90** |
| 46 | ಹಾವೇರಿ | ಹಾವೇರಿ | 14 |
| 47 | | ಹಿರೇಕೆರೂರ | 12 |
| 48 | | ರಾಣೇಬೆನ್ನೂರು | 10 |
| 49 | | ಹಾನಗಲ್ | 12 |
| 50 | | ಬ್ಯಾಡಗಿ | 8 |
| 51 | | ಸವಣೂರ | 8 |
| | | **ಒಟ್ಟು** | **69** |
| 52 | ಹುಬ್ಬಳ್ಳಿ-ಧಾರವಾಡ ನಗರ ಸಾರಿಗೆ ವಿಭಾಗ | ಹು.ನ.ಸಾ.ಘ-01 | 28 |
| 53 | | ಧಾ.ನ.ಸಾ.ಘ | 26 |
| 54 | | ಬಿ.ಆರ್.ಟಿ.ಎಸ್.ಹು | 0 |
| 55 | | ಬಿ.ಆರ್.ಟಿ.ಎಸ್.ಧಾ | 0 |
| | | **ಒಟ್ಟು** | **54** |
| | | **ಒಟ್ಟು** | **662** |

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:

| ಕ್ರ.ಸಂ | ವಿಭಾಗ | ಘಟಕ | ಘಟಕಗಳಿಗೆ ಒದಗಿಸಿರುವ ಬಸ್‌ಗಳ ಸಂಖ್ಯೆ |
|---|---|---|---|
| 1 | ಕಲಬುರಗಿ ವಿಭಾಗ-1 | ಕಲಬುರಗಿ ಘಟಕ-1 | 33 |
| 2 | | ಕಲಬುರಗಿ ಘಟಕ-4 | 6 |
| 3 | | ಚಿಂಚೋಳಿ | 16 |
| 4 | | ಚಿತ್ತಾಪೂರ | 17 |
| 5 | | ಕಾಳಗಿ | 12 |
| 6 | | ಸೇಡಂ | 15 |
| | | ಒಟ್ಟು | **99** |
| 7 | ಕಲಬುರಗಿ ವಿಭಾಗ-2 | ಕಲಬುರಗಿ ಘಟಕ-2 | 23 |
| 8 | | ಕಲಬುರಗಿ ಘಟಕ-3 | 19 |
| 9 | | ಆಳಂದ | 22 |
| 10 | | ಜೇವರ್ಗಿ | 18 |
| 11 | | ಅಫಜಲಪೂರ | 19 |
| | | ಒಟ್ಟು | **101** |
| 12 | ಯಾದಗಿರ | ಯಾದಗಿರ | 29 |
| 13 | | ಶಹಾಪೂರ | 31 |
| 14 | | ಗುರಮಿಟ್ಕಲ್ | 20 |
| 15 | | ಸುರಪುರ | 22 |
| | | ಒಟ್ಟು | **102** |
| 16 | ಬೀದರ | ಬೀದರ ಘಟಕ-1 | 21 |
| 17 | | ಬೀದರ ಘಟಕ-2 | 11 |
| 18 | | ಹುಮನಾಬಾದ | 28 |
| 19 | | ಬಸವಕಲ್ಯಾಣ | 30 |
| 20 | | ಭಾಲ್ಕಿ | 22 |
| 21 | | ಔರಾದ | 15 |
| | | ಒಟ್ಟು | **127** |
| 22 | ರಾಯಚೂರು | ರಾಯಚೂರು ಘಟಕ-1 | 11 |
| 23 | | ರಾಯಚೂರು ಘಟಕ-2 | 15 |
| 24 | | ರಾಯಚೂರು ಘಟಕ-3 | 14 |
| 25 | | ಲಿಂಗಸಗೂರು | 36 |
| 26 | | ಸಿಂಧನೂರು | 24 |
| 27 | | ಮಾನ್ವಿ | 11 |
| 28 | | ದೇವದುರ್ಗ | 24 |
| 29 | | ಮಸ್ಕಿ | 22 |
| | | ಒಟ್ಟು | **157** |
| 30 | ಕೊಪ್ಪಳ | ಕೊಪ್ಪಳ | 27 |
| 31 | | ಕುಷ್ಟಗಿ | 21 |
| 32 | | ಯಲಬುರ್ಗಾ | 17 |
| 33 | | ಗಂಗಾವತಿ | 19 |
| 34 | | ಕುಕನೂರು | 12 |
| | | ಒಟ್ಟು | **96** |
| 35 | ಬಳ್ಳಾರಿ | ಬಳ್ಳಾರಿ ಘಟಕ-1 | 19 |
| 36 | | ಬಳ್ಳಾರಿ ಘಟಕ-2 | 22 |

| | | | |
|---|---|---|---|
| 37 | | ಬಳ್ಳಾರಿ ಘಟಕ-3 | 0 |
| 38 | | ಸಿರಗುಪ್ಪ | 17 |
| 39 | | ಕುರಗೋಡ | 9 |
| 40 | | ಸಂಡೂರು | 35 |
| | | **ಒಟ್ಟು** | **102** |
| 41 | ಹೊಸಪೇಟೆ | ಹೊಸಪೇಟೆ | 23 |
| 42 | | ಕೂಡ್ಲಿಗಿ | 20 |
| 43 | | ಹಡಗಲಿ | 20 |
| 44 | | ಹಗರಿಬೊಮ್ಮನಹಳ್ಳಿ | 20 |
| 45 | | ಹರಪನಹಳ್ಳಿ | 20 |
| | | **ಒಟ್ಟು** | **103** |
| 46 | ವಿಜಯಪುರ | ವಿಜಯಪುರ ಘಟಕ-1 | 17 |
| 47 | | ವಿಜಯಪುರ ಘಟಕ-2 | 17 |
| 48 | | ವಿಜಯಪುರ ಘಟಕ-3 | 4 |
| 49 | | ಇಂಡಿ | 19 |
| 50 | | ಸಿಂದಗಿ | 19 |
| 51 | | ಮುದ್ದೇಬಿಹಾಳ | 22 |
| 52 | | ತಾಳಿಕೋಟ | 16 |
| 53 | | ಬ.ಬಾಗೇವಾಡಿ | 13 |
| | | **ಒಟ್ಟು** | **127** |
| | | **ಒಟ್ಟು** | **1014** |

******